ಮೈಸೂರ ಗೆಜೆಟ್.

ನಂ. 26 ಸರ್ಕಾರದಿಂದ ಪ್ರಾಯಿಸ್ ಆದ್ದು. ಸನ್ 1876.

ಬೆಂಗಳೂರು, ಶನಿವಾರ, ಜುಲೈ ತಾ॥ 1, ಸನ್ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ವ ಕೊಡಗು ಶೀಮೆಗಳ ಚೀಫ್ ಕಮ್ಮಿಷನರವರ ಇಸ್ತಿಹಾರ್ ನಾಮೆಗಳು, ಇಂಡ್ಯ ಗವರ್ಮೆಂಟನವರ ಇಸ್ತಿಹಾರ್ ನಾಮೆಗಳು. .. .. ಪುಟ 99—101

2ನೇ ಭಾಗ—ಜುಡಿಷಲ್ ಕಮ್ಮಿಷನರು, ಸರ್ವೇ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರ್ಟಿಂಡೆಂಟರು, ಡೆಪ್ಯುಟಿ ಅಕ್ಕೌಂಟೆಂಟ್ ಜನರಲ್ಲವರು, ಮಣಿ ಆರ್ಡರ್ ಕಂಟ್ರೋಲರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಮಿಲಿಟರಿ ಅಸಿಸ್ಟೆಂಟರು, ರಿಜಿಸ್ಟ್ರೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಫಾರೆಸ್ಟ್ ಸರ್ವೇಯರ್‌ವೇಟರು, ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರು, ಡಿವಿಜ್ ಜಾತ್ ಕಮ್ಮಿಷನರುಗಳು, ಡಿ॥ ಡೆಪ್ಯುಟಿ ಕಮ್ಮಿಷನರುಗಳು, ಪೊಲೀಸ್ ಸೂಪರ್ಟಿಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟ್‌ಆಫಿಸ್ ನೋಟಿಸ್‌ಗಳು. .. 307—318

3ನೇ ಭಾಗ—ಇಂಡ್ಯ ಗವರ್ಮೆಂಟನ ಮಂತ್ರಾಲೋಚಕ ಸಭೆಯವರ ಆಕ್ಟುಗಳು. .. ..

4ನೇ ಭಾಗ—ಚಿಲ್ಲರೆ ವಿಷಯಗಳ ಕಾಗದ ಪತ್ರಗಳು.— .. ..

ಸಪ್ಲಿಮೆಂಟ್—ಮೈಸೂರು ವಾಟರ್ ಸಪ್ಲೈ ಸ್ಕೀಂ. .. .. 1— 44

1ನೇ ಭಾಗ.

ಮೈಸೂರು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆಗಳು.

ನಂ. 98. ತಾರೀಖು 16ನೇ ಜೂನ್ 1876.

1870ನೇ ಇಸವಿಯ 10ನೇ ನಂಬರ್ ವುಳ್ಳ ಲ್ಯಾಂಡ್ ಅಕ್ವಿಜಿಷನ್ ಆಕ್ಟಿನ 6ನೇ ಸೆಕ್ಷನ್ ನಿಬಂಧನೆಗಳನುಸರಿಸಿ ಇದರಿಂದ ತಿಳಿಸುವದೇನಂದರೆ, ಇದರಡಿ ವಿವರಿಸಿ ಇರುವ ಮತ್ತು ಬೆಂಗಳೂರು ಹಲಸೂರಲ್ಲಿರುವ ಎರಡು ತುಂಡು ಜಮೀನ್‌ಗಳು ಪಬ್ಲಿಕ್ ಕೆಲಸಗಳಿಗಾಗಿ, ಅಂದರೆ, ಸ್ಥಳದ ಅಭಿವೃದ್ಧಿ ಕೆಲಸಗಳಿಗಾಗಿ ಕಂಟೋನ್ಮೆಂಟ್ ಮ್ಯುನಿಸಿಪಲ್ ಕಮ್ಮಿಷನರ್‌ಗಳಿಗೆ ಬೇಕಾಗಿರುತ್ತವೆ. ಮೇಲಾಮೋದರ ಮೊದಲಿಯಾರ್ರದೆಂಬ ನದರ್ಲ್ಲಿ ಜಮೀನ್‌ಗಳ ಸ್ಕೆಚ್ ಪ್ಲಾನನ್ನು, ಬೆಂಗಳೂರು ಡಿಸ್ಟ್ರಿಕ್ಟ್ ಡಿ॥ ಕಮ್ಮಿಷನರ್ ಆಫಿಸ್‌ನಲ್ಲಿ 3ನೇ ಅಸಿಸ್ಟೆಂಟ್ ಕಮ್ಮಿಷನರ್ ಆಫಿಸ್‌ನೊಳಗೆ ಕೇಳಿನೋಡಿಕ್ಕೊಳ್ಳಬಹುದು.

(1) ಒಂದು ತುಂಡು ಭೂಮಿಯ ಚತುರ್ಗಡಿ.—
ಉತ್ತರಕ್ಕೆ ಮ್ಯುನಿಸಿಪಲ್ ಭೂಮಿ. ದಕ್ಷಿಣಕ್ಕೆ ಹೊಸ ರಸ್ತೆ.
ಪೂರ್ವಕ್ಕೆ ಲಕ್ಷ್ಮಯ್ಯನಾಯಕರ ಜಮೀನ್. ಪಶ್ಚಿಮಕ್ಕೆ ಮುನಿಸಾಮಿ ವೇಸ್ತ್ರಿಯ ಭೂಮಿ.
ಇದರ ಅಳತೆ ಪುಮಾರ್ 126 ಸಲಗಜಗಳು, ಮತ್ತು $3\frac{1}{2}$ ಸಲಅಡಿಗಳು.

(2) ಮೇಲೆ ಕಂಡ ಭೂಮಿಗೆ ಸೇರಿದ ಹಾಗೆ ಇರುವ ಬಂದು ಭೂಮಿಯ ಚತುರ್ಗಡಿ.
ಉತ್ತರಕ್ಕೆ—ದಾವೋದರ ಮೊದಲಿಯಾರ್ರ ಮನೆ ಮತ್ತು ಭೂಮಿ.
ಪೂರ್ವಕ್ಕೆ—D ನಂಬರ್ 5ನೇ ರಸ್ತೆ.
ದಕ್ಷಿಣಕ್ಕೆ—ಗೋಪಾಲಮೊದಲಿಯಾರ್ರು ನಾರಾಯಣಸಾಮಿ ಮತ್ತು ಮಾಯಿಯುಡು ಇವರುಗಳ ಖಾಬತು ಭೂಮಿಗಳು.
ಪಶ್ಚಿಮಕ್ಕೆ—ಮ್ಯುನಿಸಿಪೆಲ್ ಜಮೀನ್ ಅಳತೆ ಪುಮಾರ್ 93 ಸಲಗಜಗಳು ಮತ್ತು 3 ಸಲ ಅಡಿಗಳು.

ನಂ. 103. ತಾರೀಖು 23ನೇ ಜೂನ್ 1876.

ಇನಾಂ ಇಲಾಖಾ ಅಫೀಸಿ ಯೇಟಿಂಗ್ ಅಸಿಸ್ಟೆಂಟ್ ಸೂಪರ್ಟೆಂಡೆಂಟ್ ಮೆಸ್ಸರ್ ಕಿಟ್ಟೂ ಯವರು, ತಮ್ಮ ಆಫಿಸ್ ಚಾರ್ಜನ್ನು ಮೆಸ್ಸರ್ ರಾಜಗೋಪಾಲೈಯನವರಿಂದ 1876ನೇ ಇಸವೀ ಜೂನ್ 19ನೇ ಮುಂಡಂ ಮಧ್ಯಾನ್ನಕ್ಕೆ ಪೂರ್ವ ಪುನಶ್ಚ ತೆಗದು ಕೊಂಡರು.

ನಂ. 104. ತಾರೀಖು 23ನೇ ಜೂನ್ 1876.

ಬೆಂಗಳೂರು ಡಿಸ್ಟ್ರಿಕ್ಟ್ ಆಫಿಸಿ ಯೇಟಿಂಗ್ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಸರ್ ಆನಂದರಾಯರವರಿಗೆ 1876ನೇ ಇಸವಿ ಮೇ 20ನೇ ಮುಂಡಂ 63ನೇ ನಂಬರ್ ಇಸ್ತಿಹಾರಿನಲ್ಲಿ ಕೊಡಲ್ಪಟ್ಟ ರಜಾಕ್ಕೆ ಜಾಸ್ತೀಯಾಗಿ ಮೆಡಿಕಲ್ ಸರ್ಟಿಫಿಕೇಟ್ ಮೇಲೆ ಮತ್ತೊಂದು ತಿಂಗಳ ರಜಾ ಕೊಡಲ್ಪಟ್ಟಿರುತ್ತೆ.

ನಂ. 105. ತಾರೀಖು 26ನೇ ಜೂನ್ 1876.

ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಸರ್ ಶ್ರೀನಿವಾಸೈಯಂಗಾರ್ಯವರು ಹಾಸನ ಡಿಸ್ಟ್ರಿಕ್ಟ್ ಟ್ರೆಜರಿ ಮುಜರಾಯಿ ವ ಜೈಲ್ ಇಲಾಖೆಗಳ ಚಾರ್ಜನ್ನು ಜುಡಿಷಿಯಲ್ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಸರ್ ವಿಜಯೇಂದ್ರರಾಯರವರಿಗೆ 1876ನೇ ಇಸವಿ ಜೂನ್ ಗುರ್ತಿ ತಾರೀಖು ಮಧ್ಯಾನ್ನದ್ವರ ಕೊಟ್ಟರು.

ನಂ. 106. ತಾರೀಖು 26ನೇ ಜೂನ್ 1876.

ಆಲೂರು ಮುನಸಬ್ ಪೊನ್ನರಂಗಂ ಮೊದಲ್ಯಾರ್ರವರಿಗೆ ಸಿವಿಲ್ ಲೀವ್ ಕೋಡ್ ಸಪ್ಲಿಮೆಂಟ್ F. 3ನೇ ಸೆಕ್ಷನ್ ಅನುಸರಿಸಿ ಮೆಡಿಕಲ್ ಸರ್ಟಿಫಿಕೇಟ್ ಮೇಲೆ 1876ನೇ ಇಸವಿ ಮೇ ತಾರೀಖು 17ರ ಲಾಗಾಯತು 31ರ ವರಿಗೆ 15 ದಿನಗಳ ರಜಾ ಕೊಡಲ್ಪಟ್ಟಿತು.

ನಂ. 107. ತಾರೀಖು 27ನೇ ಜೂನ್ 1876

ಕುದಾ ಕುದ್ದ ಪತ್ರಿಕೆ—ಸ್ರ 1876ನೇ ಇಸವಿ ಫಿಬ್ರವರಿ 9ನೇ ಮುಂಡಂ 8515—ರೆವಿನ್ಯೂ 20ನೇ ನಂಬರ್ ಚೀವ್ಕಮ್ಮಿಷನ್ನರವರ ಪ್ರೊಸೀಡಿಂಗ್ಸಿನಲ್ಲಿ ಛಾಪಿಸಲ್ಪಟ್ಟ ತಖ್ತೆಯಲ್ಲಿ ಕಡೂರು ಡಿಸ್ಟ್ರಿಕ್ಟ್ಗೆ ದಾಖಲಾಗಿರುವ ರೂಪಾಯಿ 1983—12—0ಗೆ ಬದಲಾಗಿ ರೂಪಾಯಿ 1973—12—0 ಯಂಬದಾಗಿ ಪೋದಿಕೊಳ್ಳಬೇಕು, ಮತ್ತು ಖುಲ್ಲು 11, 315—3—7 ಪೈ ಇರುವದನ್ನು 11, 305—3—7 ಪೈಗೆ ತಿದ್ದಿಕೊಳ್ಳತಕ್ಕದ್ದು.

ನಂ. 108. ತಾರೀಖು 28ನೇ ಜೂನ್ 1876.

ಅಮಲ್ದಾರ್ ಗುಂಡಪ್ಪನವರಿಗೆ 1876ನೇ ಇಸವಿ ಮೇ 19ನೇ ಮುಂಡಂಲಾಗಾಯಿತು 45 ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 109. ತಾರೀಖು 28ನೇ ಜೂ೯ 1876.

ಮೆಸ್ಟರ್ ಲೇಸಿಯವರು ಬೆಂಗಳೂರು ವ ಕೊಲಾರ್ ಜುಡಿಸಿಯಲ್ ಅಸಿಸ್ಟೆಂಟ್ ಕೋರ್ಟ್‌ಗಳ ಚಾರ್ಜನ್ನು ಮೆಸ್ಟರ್ ತಂಬುಚೆಟ್ಟಿಯವರಿಂದ 1876ನೇ ಇಸವಿ ಜೂ೯ 19ನೇ ಮುಕ್ತಂ ಮಧ್ಯಾನ್ನಕ್ಕೆ ಪೂರ್ವ ತೆಗದು ಕೊಂಡರು.

"ಬವೋಜೀಬ್ ಹುಕ್ಕುಂ,"

T. CLARKE,
Offg. Secretary.

ಪಬ್ಲಿಕ್ ವರಕ್ಸ್.

ನಂ. 15, ತಾರೀಖು 24ನೇ ಜೂ೯ 1876.

2ನೇ ಗ್ರೇಡ್ ಅಸಿಸ್ಟೆಂಟ್ ಇಂಜಿನಿಯರ್ ಮೆಸ್ಟರ್ ಟೂಡ್ ವ ಮೆಸ್ಟರ್ ಷಾರ್ಪ್‌ಯಿವರುಗಳು 1875ನೇ ಇಸವಿ ಡಿಸೆಂಬರ್ ತಿಂಗಳು 28ನೇ ತಾರೀಖಿನಲ್ಲಿ ಬೆಂಗಳೂರಿಗೆ ತಲಪಿದರು, ಮತ್ತು ನಂದೀದುರ್ಗ ಕಾವೇರಿ ಈ ಡಿವಿಜ೯ಗಳಿಗೆ ಮೊಕರರ್ ಮಾಡಲ್ಪಟ್ಟರು.

2ನೇ ಗ್ರೇಡ್ ಅಸಿಸ್ಟೆಂಟ್ ಇಂಜನಿಯರ್ ಮೆಸ್ಟರ್ ಗಿಲ್ಬರ್ಟ್‌ಯವರು 1875ನೇ ಇಸವಿ ಡಿಸೆಂಬರ್ 15ನೇ ತಾರೀಖಿನಲ್ಲಿ ಬೆಂಗಳೂರಿಗೆ ಸೇರಿದರು, ಮತ್ತು 1ನೇ ನಂಬರ್ ಟ್ಯಾಂಕ್ ಡಿವಿಜನ್ನಿಗೆ ಮೊಕರರ್ ಮಾಡಲ್ಪಟ್ಟರು.

"ಬವೋಜೀಬ್ ಹುಕ್ಕುಂ,"

W. R. JOHNSON, *Lieut.-Col.*,
Offg. Secretary, P. W. D.

ನಂ. 16. ತಾರೀಖು 17ನೇ ಜೂ೯ 1876

ಬೆಂಗಳೂರು ಕೋಲಾರ ಡಿವಿಜ೯ ಅಸಿಸ್ಟೆಂಟ್ ಇಂಜಿನಿಯರ್ ಲೆವ್‌ಟಿನೆಂಟ್ ಬ್ರೂಕಸ್ ಯವರಿಗೆ ಬರುವ ತಿಂಗಳು ಗುರ್ಯೇ ತಾರೀಖು ಲಗಾಯಿತು ಮೂರು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟರುತ್ತೆ.

C. BOWEN, *Captain*, R. E.,
Offg. Under-Secy. R. & B. Branch.